Sri D. DEVARAJ URS.—It is for them to draw any conclusion.

ಶ್ರೀ ಜಿ. ಎ. ತಿಮ್ಮಪ್ಪಗೌಡ.—4 ಮೈಲಿಗಳಿಗೆ ಒಂದು ಫರ್ಲಾಂಗ್ ಹೆಚ್ಚಾದರೂ ಸಹ 8 ಮೈಲಿಗಳ ಛಾರ್ಜನ್ನು ವಿಧಿಸುವುದರಿಂದ ಪ್ರಯಾಣಿಕರಿಗೆ ಅನನುಕೂಲವಾಗುತ್ತಿಲ್ಲವೆ ?

ಶ್ರೀ ಡಿ. ದೇವರಾಜ ಅರಸ್.—ಅದು ಸರ್ಕಾರದ ಗಮನಕ್ಕೆ ಬಂದಿದೆ. ಆದರೆ ಹಾಗೆ ಮಾಡದಿದ್ದರೆ ಬಹಳ ಕಷ್ಟವಾಗುತ್ತದೆ. ಟಿಕೆಟ್ ಇಷ್ಯೂ ಮಾಡುವ ಹಂತದಲ್ಲಿ ತೊಂದರೆಯಾಗುವುದರಿಂದ ಏನು ಮಾಡಲು ಸಾಧ್ಯವೆಂಬುದನ್ನು ಆಲೋಚಿಸಬೇಕಾಗುತ್ತದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ನಾಲ್ಕ ಮೈಲಿಗಳಿಗಿಂತ ಸ್ವಲ್ಪ ಹೆಚ್ಚು ಪ್ರಯಾಣ ಮಾಡುವವರಿಗೆ 8 ಮೈಲಿಗಳ ಛಾರ್ಜನ್ನು ವಿಧಿಸಿದರೆ ಅದು ಮಹಾಜನರ ಮೇಲೆ ಬೀಳುವುದಿಲ್ಲವೆ ?

ಶ್ರೀ ಡಿ. ದೇವರಾಜ ಅರಸ್.—ಹೌದು, ಬೀಳುತ್ತದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಬಡವರಲ್ಲವೇ ಸ್ವಲ್ಪ ದೂರ ಪ್ರಯಾಣ ಮಾಡುವುದು ?

ಶ್ರೀ ಡಿ. ದೇವರಾಜ ಅರಸ್.—ತೀರಾ ಬಡವರು ನಾಲ್ಕು ಮೈಲಿ ನಡೆದುಕೊಂಡೇ ಹೋಗುತ್ತಾರೆ.

ಶ್ರೀ ಎ. ಜೆ. ದೊಡ್ಡಮೇಟಿ.—ನಾಲ್ಕು ಮೈಲಿಗೆ ಒಂದು ಸ್ಟೇಜ್ ಇರುವುದನ್ನು ಕಡಮೆ ಮಾಡಿ ಏಳು ಮೈಲಿಗೆ ಮಾಡಲು ಸಾಧ್ಯವಿಲ್ಲವೆ ?

Sri D. DEVARAJ URS.—I cannot commit myself, but it will be examined.

ಶ್ರೀ ಕೆ. ದೇವಯ್ಯ.—ಬೆಂಗಳೂರು ನಗರದಲ್ಲಿ ನಿಗದಿ ಮಾಡಿರುವ ದರದ ಮೇರೆಗೆ ಜನರಿಂದ ಛಾರ್ಜು ವಸೂಲು ಮಾಡಲು ತೊಂದರೆಯಾಗುತ್ತಿರುವುದು ಗೊತ್ತಿದೆಯೇ ?

ಶ್ರೀ ಡಿ. ದೇವರಾಜ ಅರಸ್.—ಈ ಪ್ರಶ್ನೆಗೆ ಇಲ್ಲ ಅವಕಾಶವಿಲ್ಲ.

Grant of loan to Scheduled Caste people to build houses through societies.

*Q.—77. **Sri K. P. REVANNA SIDDAPPA** (Tiptur).—

Will the Government be pleased to state :—

(*a*) whether it is a fact that they have issued an order last year that they would grant loan to Scheduled Caste people to build houses through societies ;

(*b*) whether such a society has been started in Tiptur Taluk, and if so, the amount of loan they have sanctioned for the society for the above purpose ?

*A.—**Sri RAMAKRISHNA HEGDE** (Minister for Co-operation and Development).—

(*a*) Yes.

(*b*) A society has been registered, but it has not yet started working. No financial assistance has been sanctioned.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಒಂದು ಸೊಸೈಟಿಯನ್ನು ರಿಜಿಸ್ಟರ್ ಮಾಡಿದೆಯೆಂದು ಉತ್ತರದಲ್ಲಿ ಹೇಳಿದೆ. ಅದರ ಹೆಸರೇನು ?

†ಶ್ರೀ ರಾಮಕೃಷ್ಣ ಹೆಗ್ಗಡೆ.—ಹೌಸ್ ಬಿಲ್ಡಿಂಗ್ ಕೋ-ಆಪರೇಟಿವ್ ಸೊಸೈಟಿ.

Sri ANGADI CHANNABASAPPA.—Is it for Scheduled Castes people only ?

Sri RAMAKRISHNA HEGDE.—Yes.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಅನುಸೂಚಿತ ಜಾತಿಯವರಿಗೆ ಮನೆಗಳನ್ನು ಕಟ್ಟಿಕೊಳ್ಳಲು ಸಾಲ ಕೊಡುವ ಯಾವ ಸೊಸೈಟಿಯೂ ಕೂಡ ತಿಪಟೂರು ತಾಲ್ಲೂಕಿನಲ್ಲಿ ರಿಜಿಸ್ಟರಾಗಿಲ್ಲವೆಂಬುದು ಗಮನಕ್ಕೆ ಬಂದಿದೆಯೆ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ನನ್ನ ಬಳಿ ಇರುವ ಸಮಾಚಾರದ ಪ್ರಕಾರ ಒಂದು ಸೊಸೈಟಿಯು ರಿಜಿಸ್ಟರಾಗಿದೆ ಎಂದು ತಿಳಿದು ಬಂದಿದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಈಗ ಕೊಟ್ಟಿರುವ ಉತ್ತರ ತಪ್ಪು. ಇನ್ನು ಮುಂದೆ ಅದರೂ ಮಂತ್ರಿಗಳು ಇಂಥ ತಪ್ಪು ಉತ್ತರ ಕೊಡುವುದಿಲ್ಲವೆಂದು ಭರವಸೆ ಕೊಡುವರೇ ?

Mr. SPEAKER.—The Hon'ble Minister need not answer that question.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಈ ಸೊಸೈಟಿಯ ಮೂಲಕ ಯಾರಿಗಾದರೂ ಸಾಲ ಕೊಟ್ಟಿದ್ದೀರಾ ?

ಶ್ರೀ ರಾಮಕೃಷ ಹೆಗ್ಗಡೆ.—ಇದುವರೆಗೆ ಯಾರಿಗೂ ಕೊಟ್ಟಿಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಇಂಥ ಸೊಸೈಟಿಯನ್ನು ಸ್ಥಾಪಿಸುವುದರಿಂದ ಮಹಾಜನರಿಗೇನು ಸಹಾಯವಾದಂತಾಯಿತು ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಸಹಾಯವಾಗಲೆಂಬ ಉದ್ದೇಶದಿಂದಲೇ ಸ್ಥಾಪಿಸುವುದು. ಸಾಲ ಕೊಡುವುದರಿಂದ ಸಹಾಯವಾಗುವುದು.

Sri G. VENKATAI GOWDA.—May I know whether any upward revision has taken place ?

Sri D. DEVARAJ URS.—It is obvious; it is in the Notification.

Sri G. VENKATAI GOWDA.—The question is specific whether the Government has made a further upward revision.

Sri D. DEVARAJ URS.—I do not mind telling him that there has been an increase by 1 nP.

Sri S. SIVAPPA.—In pursuance of the Government policy to have mixed economy, will the Government be pleased to introduce private operators also along with the Government buses so that this mixed economy will work well and the rates will adjust themselves ?

Sri D. DEVARAJ URS.—Perhaps that will lead to unhealthy competition

and that is why transport authorities have taken a decision not to allow private operators on one and the same route where the M.S.R.T.C. buses run.

Sri S. SIVAPPA.—After experimenting for several years now, has it not come to the notice of Government that the operation of the Government Road Transport buses has not come up to our expectations ?

Sri D. DEVARAJ URS.—Our experiments are not yet complete.

Sri ANGADI CHANNABASAPPA.—May I know the registered number of the society ?

Sri RAMAKRISHNA HEGDE.—I am sorry I do not have that information, but I can say that the society has been registered in February 1962.

Sri ANGADI CHANNABASAPPA.—The name of the society will go with the registered number. So, I want to know the registered number of the society.

(*No reply*).

Sri C. J. MUCKANNAPPA.—When the Government is not willing to say whether it is registered or not, will the Speaker kindly withhold the question and ask the Government to furnish that information ?

Sri RAMAKRISHNA HEGDE.—I have already stated that the society has been registered in the month of February 1962. If any Hon'ble Member wants more details, he can come to me and I shall furnish any details that he wants.

Sri S. SIVAPPA.—On a point of procedure, Sir. When an Hon'ble Member puts a supplementary and the Hon'ble Minister concerned kept mum, what happens to that supplementary ? He must either ask for notice or say that the information is being collected.

Sri KUNDUR RUDRAPPA.—On a point of order, Sir. ತಾವು ಅಧ್ಯಕ್ಷರು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಿರಿ. ಅದರಂತೆ ಮಾತನಾಡುವ ಮುನ್ನ ನಡುವೆ ಎರಡು-ಮೂರು ಜನರಿಗೆ ಅವಕಾಶ ಕೊಟ್ಟು ಬಿಟ್ಟಿರಿ. ಈಗ ನನ್ನ ಪ್ರಶ್ನೆಗೆ ಅವಕಾಶ ಕೊಡಬೇಕು. ಅಧ್ಯಕ್ಷರು ಮಧ್ಯೆ ಬೇರೆಯವರಿಗೆ ಅವಕಾಶ ಕೊಡಕೂಡದು.

Mr. SPEAKER.—There is no point of order in it. In the first instance, a question was put asking for the registered number of the society. The Hon'ble Minister said that he had not got that information. The question was repeated twice but he did not give any reply. Later on, he said that if any member wanted any particulars, he could go to him and he would furnish it. That is how the position stood when the Leader of the Opposition raised a question of procedure. I would very much suggest to the Hon'ble Minister to try to get the information and furnish to the House as early as possible. I can very well appreciate the difficulty that he has not got it with him at the moment. If the Members choose to go to him and get the information, well and good but if they do not choose to go to him, he will kindly furnish it to the House.

Sri RAMAKRISHNA HEGDE.—Sir, I beg to state that we try to have information for whatever supplementaries we can foresee. But if they ask for details which nobody can foresee, then the difficulty arises.

ಶ್ರೀ ಬಿ. ಹುಚ್ಚೇಗೌಡ.—ಮನೆ ಕಟ್ಟಿಕೊಳ್ಳುವುದಕ್ಕೆ ತಾವು ಹಣ ಕೊಡುತ್ತೀರಲ್ಲಾ ಅದು ಆಧಾರದ ಮೇಲಲ್ಲವೇ ಕೊಡುವುದು ?

Sri RAMAKRISHNA HEGDE.—That is on security.

ಶ್ರೀ ಬಿ. ಹುಚ್ಚೇಗೌಡ.—ಎಷ್ಟರವರೆಗೆ ಹಣ ಕೊಡುತ್ತೀರಿ ?

Sri RAMAKRISHNA HEGDE.—If you permit me, Sir, I will read out the conditions.

Mr SPEAKER.—If it is a long one, you may place it on the Table of the House.

ಶ್ರೀ ಬಿ. ಹುಚ್ಚೇಗೌಡ.—ಮುಂಚೆ ಬಡವರಾಗಿದ್ದವರಿಗೆ 300-400 ರೂಪಾಯಿಗಳನ್ನು ಕೊಡುತ್ತಿದ್ದುದರಿಂದ ಅವರು ಮನೆಗಳನ್ನು ಕಟ್ಟಿಕೊಳ್ಳಲು ಅನುಕೂಲವಾಗಿತ್ತು. ಈಗ ಹೊಸ ಸ್ಕೀಮಿನ ಪ್ರಕಾರ ಪೂರ್ತಿ ಕೊಡದೆ ಅವರು ಮನೆ ಕಟ್ಟುವುದೇನಿಂತು ಹೋಗಿದೆ. ಹೀಗಾದರೆ ಅವರೇನು ಮಾಡಬೇಕು ?

Sri RAMAKRISHNA HEGDE.—I do not agree with the Hon'ble Member. After thorough examination Government has taken a decision last year and the former scheme of subsidising the housing scheme was discontinued. It is the view of the Government that this new scheme is more beneficial to the Scheduled Castes and Scheduled Tribes people.

ಶ್ರೀ ಬಿ. ಹುಚ್ಚೇಗೌಡ.—ಹೋದ ವರ್ಷ ಇದರಿಂದ ಎಷ್ಟು ಜನರಿಗೆ ಅನುಕೂಲವಾಗಿದೆ ?

Sri S. R. KANTHI.—It is unfortunate I have to intervene in connection with this question. What the Hon'ble Minister for Co-operation said is a fact, but after the new Ministry was formed, the whole question was reviewed and we have now revised the scheme so as to pay four hundred rupees to the Scheduled Castes and Scheduled Tribes people by way of subsidy. We are not doing it ourselves now but we are paying money to the Taluka Development Board which will manage the whole affair.

Mr. SPEAKER.—The point is whether it arises at all from this question.

ಶ್ರೀ ಕುಂದೂರು ರುದ್ರಪ್ಪ.-ಹರಿಜನರಿಗೆ ಇತ್ತೀಚೆಗೆ ಅನಿಸ್ಟೆಂಟ್ ಕಮೀಷನರುಗಳ ಮುಖಾಂತರ ಮನೆ ಕಟ್ಟಿಕೊಳ್ಳುವುದಕ್ಕೆ ಗ್ರಾಂಟ್ ಕೊಡುತ್ತೇವೆಂದು ಆರ್ಡರ್ ಮಾಡಿದ್ದೀರಿ. ಈ ಆರ್ಡರ್ ಆಗುವುದಕ್ಕೆ ಮುಂಚೆ ಹರಿಜನರು ಮನೆ ಕಟ್ಟಿಕೊಳ್ಳಲು 100, 150 ರೂಪಾಯಿ ಕೊಟ್ಟುಕೊಂಡವರಿಗೆ ಬಾಕಿ ದುಡ್ಡನ್ನು ಕೊಡಬೇಕಲ್ಲವೇ ?

Sri RAMAKRISHNA HEGDE.—That is a suggestion for action.

Transfer of minor tanks having an achkat up to 50 acres to the control of Taluk Boards.

*Q.—94. Sri H. D. DEVE GOWDA (Holenarasipur).

Will the Government be pleased to state :—

(*a*) whether the minor tanks having the achkat upto 50 acres have been transferred to the control of Taluk Boards ;

(*b*) if so, whether they have provided the required amount to the Taluk Boards for maintenance of these tanks ;

(*c*) whether the Taluk Boards have made a request for allotment of funds for the repair of these minor tanks ;

(*d*) the steps they have taken to provide money ?

A.—Sri RAMAKRISHNA HEGDE (Minister for Co-operation and Development).—

(*a*) No. There is no provision in the Mysore Village Panchayats and Local Boards Act, 1959, for transfer of minor tanks having the achkat up to 50 acres, to the control of Taluk Development Boards.

(*b*), (*c*) and (*d*) Do not arise.

ಶ್ರೀ ಎಚ್. ಡಿ. ದೇವೇಗೌಡ.—50 ಎಕರೆಗಳಿಗೆ ಒಳಪಟ್ಟು ಅಚ್ಚುಕಟ್ಟಿರುವ ಕೆರೆಗಳನ್ನು ತಾಲ್ಲೂಕ್ ಬೋರ್ಡ್‌ಗಳಿಗೆ ವರ್ಗ ಮಾಡಿಲ್ಲವೆಂದು ತಾವು ಹೇಳಿದ್ದೀರಿ. ಹಾಗಾದರೆ ಎಷ್ಟು ಎಕರೆಗೊಳಪಟ್ಟಿರುವ ಕೆರೆಗಳನ್ನು ತಾಲ್ಲೂಕ್ ಬೋರ್ಡ್‌ಗಳಿಗೆ ಪಹಿಸಿದ್ದೀರಿ ?

†ಶ್ರೀ ರಾಮಕೃಷ್ಣ ಹೆಗ್ಗಡೆ.—ಹತ್ತು ಎಕರೆಗಳಿಗೆ ಒಳಪಟ್ಟಿರುವುದನ್ನು ಮಾಡಿದೆ.

ಶ್ರೀ ಎಚ್. ಡಿ. ದೇವೇಗೌಡ.—ಹತ್ತು ಎಕರೆಗಳಿಗೆ ಒಳಪಟ್ಟಿರುವುದು ಕ್ರಮೇಣ ಇಪ್ಪತ್ತು, ಮೂವತ್ತು, ಎಕರೆಗಳಾದರೆ ಅದನ್ನು ನೋಡಿಕೊಳ್ಳುವವರು ಯಾರು ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಅಂಥ ನಿಷ್ಪೇಶ ಬಂದಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಈಗಾಗಲೇ ಅಂಥ ನಿಷ್ಪೇಶ ಬಂದು ಹತ್ತು ಎಕರೆಗಳಿಗೆ ಮೇಲ್ಪಟ್ಟಿರತಕ್ಕ ಕೆರೆಗಳನ್ನು ತಾಲ್ಲೂಕ್ ಬೋರ್ಡಿನವರು ತಾವು ಮಾಡುವುದಕ್ಕಾಗುವುದಿಲ್ಲವೆಂದು ಕಾಗದ ಪತ್ರಗಳನ್ನು ನಡೆಸುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಅಂಥ ನಿದರ್ಶನಗಳು ಗಮನಕ್ಕೆ ಬಂದಿಲ್ಲ.

Ratio of Contribution fixed by the Government as share from the Public in respect of the Construction of Primary School Building.

*Q.—95. Sri H. D. DEVE GOWDA (Holenarasipur).—

Will the Government be pleased to state :—

(*a*) the ratio of contribution fixed as share from the public and from the Government in respect of the construction of a primary school building ;

(*b*) whether it is a fact that they have modified the old rules governing the ratio of contribution ;

(*c*) whether they are aware of the fact that there is no adequate response from the public in this matter because of the fixing of higher rate of contribution from the public ;

(*d*) whether they will take suitable steps to set right the matter ?

A.—Sri S. R. KANTHI (Minister for Education).—

(*a*) The Government contribution is limited to Rs. 1,000 only per class room.

(*b*) Yes.

(*c*) Good response is expected.

(*d*) This question does not arise.